ಅಸಲು ದಾವಾಃ - 48/2016 ಡಿ.ಡಬ್ಲ್ಯೂಃ- 1

ದಿನಾಂಕಃ 23.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿಗಳ ಪರ ಶ್ರೀ.ಯು ಕೆ ವಕೀಲರಿಂದ

ನಾನು ಸೇನೆಯಲ್ಲಿ ಕೆಲಸ ಮಾಡಲು ಹೋಗಿದ್ದಾಗ ಮಹದೇವಪ್ಪ ಹಾಗೂ ಹನುಮಪ್ಪರವರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿ. ಆ ಸಮಯದಲ್ಲಿ ದಾವಾ ಆಸ್ತಿಗಳನ್ನು ಮಹದೇವಪ್ಪ ಹಾಗೂ ಹನುಮಪ್ಪ ರವರು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿಯು ರಾಮಪ್ಪ ರವರು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸೇನೆಯಿಂದ ನಿವೃತ್ತಿಯಾಗಿ ಊರಿಗೆ ಬಂದ ನಂತರ ದಾವಾ ಆಸ್ತಿಗಳನ್ನು ಹಿಸ್ಸೆ ಮಾಡಿಕೊಳ್ಳಬೇಕು ಎಂದು ಊರಿನಲ್ಲಿ ಪಂಚಾಯತಿ ಮಾಡಿಸಿದ್ದು ಅದಕ್ಕೆ ನಾನು ಹೋಗಿಲ್ಲ ಎಂದರೆ ಸಾಕ್ಷಿಯು ಯಾವುದೇ ಪಂಚಾಯತಿ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಮಾರಾಟ ಮಾಡಿ ದಾವಣಗೆರೆಯಲ್ಲಿ ವಾಸ ಮಾಡಲು ಯೋಜನೆ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸರ್ವೆ ನಂ.1/4 ರಲ್ಲಿನ ಜಮೀನನ್ನು ಅರಕೆರೆ ರಂಗನಾಥ ರವರಿಗೆ ಮಾರಾಟ ಮಾಡಲು ಮಾತುಕತೆ ಮಾಡಿದ್ದೆ ಎಂದರೆ ಸರಿಯಲ್ಲ. ಹಾಗಾಗಿಯೇ ರಾಮಪ್ಪ ಹಾಗೂ ಸಿದ್ದಪ್ಪರವರು ಓಎಸ್ 63/2002 ರಂತೆ ನನ್ನ ವಿರುದ್ಧ ದಾವೆ ಹಾಕಿದ್ದರು ಎಂದರೆ ಸಾಕ್ಷಿಯು ಸದರಿ ದಾವೆ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ನಂತರ ನಾನು ಓಎಸ್ 63/2002 ರ ದಾವೆ ನಡೆಯುತ್ತಿದ್ದಾಗಲೇ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಐಟಂ ನಂ.1 ರ ಆಸ್ತಿಯನ್ನು ವೆಂಕಟೇಶಪ್ಪ ಬಿನ್ ರಾಮಪ್ಪ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಸಾಲಗಳನ್ನು ತೀರಿಸಿಕೊಳ್ಳಲು ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವೆ ನಡೆಯುತ್ತಿದ್ದಾಗಲೇ ವೆಂಕಟೇಶಪ್ಪರವರಿಂದ ದಾವಾ ಐಟಂ ನಂ.1 ಆಸ್ತಿಯನ್ನು ನಾನು ಪುನಃ ಬರೆಸಿಕೊಂಡಿರುತ್ತೇನೆ ಎಂದರೆ ಸರಿ.

ದಾವಾ ಐಟಂ ನಂ.1 ರ ಆಸ್ತಿಯ ಪಹಣಿ ನನ್ನ ಹೆಸರಿಗೆ ಇದೆ ಎಂದರೆ ಹೌದು. ದಾವಾ ಐಟಂ ನಂ.6 ರ ಆಸ್ತಿಯ ಖಾತೆ ನನ್ನ ಹೆಸರಿಗೆ ನಾಮಕಾವಸ್ಥೆಯಿದ್ದು ಅದನ್ನು ದುರುಪಯೋಗ

ಪಡಿಸಿಕೊಂಡು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ದಾವಾ ಐಟಂ ನಂ.6 ರ ಆಸ್ತಿಯನ್ನು ಎ.ಜಿ ಚಂದ್ರಪ್ಪರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ ಮುಂದುವರೆದು ಸಾಕ್ಷಿಯು ನನ್ನ ಸಾಲಗಳಿಗೆ ಮಾರಾಟ ಮಾಡಿ ಅದನ್ನು ಪುನಃ ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.6 ರ ಆಸ್ತಿಯು ನಾಮಕಾವಸ್ಥೆಗೆ ಈಗಲೂ ನನ್ನ ಹೆಸರಿಗೆ ಇದೆ ಎಂದರೆ ಸಾಕ್ಷಿಯು ನನ್ನ ಹೆಸರಿಗೆ ಖಾತೆ ಇದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.6 ರ ಆಸ್ತಿಯನ್ನು ನಂತರ ಎ.ಜಿ ಪ್ರಸಾದ್ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಎ.ಜಿ ಪ್ರಸಾದ್ ರವರು ಈ ದಾವೆಯಲ್ಲಿ 2 ನೇ ಪ್ರತಿವಾದಿ ಎಂದರೆ ಸರಿ. ದಾವಾ ಐಟಂ ನಂ.4 ಮತ್ತು 6 ರ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರಿಂದ ನನಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಹಾಗಾಗಿ ಸದರಿ ಕ್ರಯಪತ್ರಗಳು ವಾದಿಗಳಿಗೆ ಬಾಧಕವಾಗುವುದಿಲ್ಲ ಎಂದರೆ ಸರಿಯಲ್ಲ.

ಓಎಸ್ 63/2002 ರ ದಾವೆಯಲ್ಲಿ ಹಿಸ್ಸೆ ತೀರ್ಮಾನ ಆಗಿಲ್ಲ ವಾದಿಗಳು ಸರಿಯಾಗಿ ದಾವೆಗೆ ಹಾಜರಾಗಿಲ್ಲದ ಕಾರಣ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ಹಾಗೂ ವಾದಿಗಳ ಒಟ್ಟು ಕುಟುಂಬದ ಆಸ್ತಿಗಳಾಗಿದ್ದರಿಂದ ವಾದಿಗಳಿಗೂ ಹಿಸ್ಸೆ ಇದೆ ಎಂದರೆ ಸರಿಯಲ್ಲ. ವಾದಿಗಳಿಗೆ ಹಿಸ್ಸೆ ತಪ್ಪಿಸಲು ಸುಳ್ಳು ತಕಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ